## ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

**ಕಲಿಕಾ ಸಂಗಮ 2021-22**

ವಿಷಯ: ಸಮಾಜ ವಿಜ್ಞಾನ | **ಅಭ್ಯಾಸ ಹಾಳೆ 1** | ತರಗತಿ: 6ನೇ

---

- ❖ ನಮ್ಮ ನಾಡು ಕನ್ನಡ ನಾಡು. "ಜಯ ಹೇ ಕರ್ನಾಟಕ ಮಾತೆ" ಇದು ನಮ್ಮ ನಾಡಗೀತೆಯಾಗಿದೆ. ಕೆಳಗೆ ನೀಡಿರುವ ಭಾವಚಿತ್ರದಲ್ಲಿರುವವರು ನಮ್ಮ ನಾಡಗೀತೆ ಬರೆದವರು. ಇವರು ಯಾರೆಂದು ತಿಳಿದು ಬರೆ.



ನಮ್ಮ ನಾಡಗೀತೆ ಬರೆದವರು ....................

- ❖ ಕೆಳಗೆ ನಮ್ಮ ನಾಡಗೀತೆಯನ್ನು ನೀಡಿದೆ ಅಭ್ಯಾಸ ಮಾಡು:



**ನಾಡಗೀತೆ – ಜಯ ಹೇ ಕರ್ನಾಟಕ ಮಾತೆ!**

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ

ಕುಮಾರವ್ಯಾಸರ ಮಂಗಳಧಾಮ!
ಕವಿ ಕೋಗಿಲೆಗಳ ಪುಣ್ಯಾರಾಮ!

ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!

ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

– ರಾಷ್ಟ್ರಕವಿ ಕುವೆಂಪು

- ❖ ಹೊಂದಿಸಿ ಬರೆಯಿರಿ:

1. ಹಸುರಿನ ಗಿರಿಗಳ – ನೋಟ
2. ನಿನ್ನಯ ಕೊರಳಿನ – ತೋಟ
3. ಸರ್ವ ಜನಾಂಗದ ಶಾಂತಿಯ – ಮಾಲೆ
4. ರಸಿಕರ ಕಂಗಳ ಸೆಳೆಯುವ – ಸಾಲೆ

**************************************************@@@@@**************************************************

## ಅಭ್ಯಾಸ ಹಾಳೆ 2

1) ನಾಡಗೀತೆಯಲ್ಲಿ ಬಂದಿರುವ ಕವಿಗಳ ಹೆಸರುಗಳನ್ನು ಪಟ್ಟಿ ಮಾಡಿ.

2) ನಾಡಗೀತೆಯಲ್ಲಿ ಬಂದಿರುವ ನದಿಗಳ ಹೆಸರುಗಳನ್ನು ಬರೆಯಿರಿ.

3) ಕೆಳಗಿನ ಪೂಜನೀಯ ಸ್ಥಳಗಳನ್ನು ನಾಡಗೀತೆಯಲ್ಲಿ ಬಂದಿರುವ ಧರ್ಮಗಳ ಜೊತೆ ಬರೆ.

| ಸ್ಥಳಗಳು | ಧರ್ಮಗಳ ಹೆಸರು |
|---|---|
|  | ……………………… |
|  | ……………………… |
|  | ……………………… |
|  | ……………………… |

❖ ನಾಡಗೀತೆಯಲ್ಲಿ ಬಂದಿರುವ ಪ್ರಾಸಪದಗಳನ್ನು ಬರೆ.

ಉದಾ: ನಾಡೆ – ಬೀಡೆ

………………………………

………………………………

………………………………

………………………………

****************************************************@@@@@****************************************************

## ಅಭ್ಯಾಸ ಹಾಳೆ 3 (ನಾಡಗೀತೆ ಆಧರಿಸಿ)

❖ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಕನ್ನಡನಾಡು ಯಾವುದರ ಗಣಿಯಾಗಿದೆ?

   ಉ: ………………………………………………………………………………………………

2. ನಾಡಗೀತೆಯಲ್ಲಿ ಬಂದಿರುವ ಪ್ರಸಿದ್ಧ ವಚನಕಾರರು ಯಾರು?

   ಉ: ………………………………………………………………………………………………

3. ಕರ್ನಾಟಕ ಆಳಿದ ನಾಡಗೀತೆಯಲ್ಲಿ ಬಂದಿರುವ 2 ರಾಜವಂಶಗಳು ಯಾವುವು?

   ಉ: ………………………………………………………………………………………………

❖ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ನಾಡಗೀತೆಯಲ್ಲಿ ಕನ್ನಡನಾಡನ್ನು ಹೇಗೆ ವರ್ಣಿಸಿದೆ?

2. ನಾಡಗೀತೆಯಿಂದ ನೀವು ಯಾವ ಯಾವ ಮೌಲ್ಯಗಳನ್ನು ತಿಳಿಯುವಿರಿ?

3. ನಾಡಗೀತೆಯಲ್ಲಿ ನಿನಗೆ ತುಂಬಾ ಇಷ್ಟವಾದ ನಾಲ್ಕು ಸಾಲುಗಳನ್ನು ಬರೆಯಿರಿ.

❖ ಕುವೆಂಪು ಬಗ್ಗೆ ಕೆಳಕಂಡ ಮಾಹಿತಿ ಓದಿ ತಿಳಿ:

ನಮ್ಮ ನಾಡಗೀತೆಯನ್ನು ಬರೆದವರು ಕುವೆಂಪು. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪರವರ ಸಂಕ್ಷಿಪ್ತ ರೂಪವೇ ಕುವೆಂಪು. ಇವರು ಡಿಸೆಂಬರ್ 29, 1904ರಲ್ಲಿ ಜನಿಸಿದರು. ಕನ್ನಡದಲ್ಲಿ ಮೊದಲ ಬಾರಿಗೆ ಜ್ಞಾನಪೀಠ ಪ್ರಶಸ್ತಿ ಪಡೆದವರು. ಕನ್ನಡದ ಎರಡನೆಯ ರಾಷ್ಟ್ರಕವಿ. ಶ್ರೀ ರಾಮಾಯಣ ದರ್ಶನಂ ಕೃತಿ ಇವರಿಗೆ ಜ್ಞಾನಪೀಠ ಪ್ರಶಸ್ತಿ ತಂದಿತು. ಕನ್ನಡ ನಾಡು–ನುಡಿ–ಸಂಸ್ಕೃತಿ ಕುರಿತಾದ ಅನೇಕ ಕೃತಿಗಳು ಇವರಿಂದ ರಚಿತವಾಗಿವೆ. ನವಿಲು, ಕೊಳಲು ಮುಂತಾದ ಕವನ ಸಂಕಲನಗಳು.

***************************************************@@@@@***************************************************

## ಅಭ್ಯಾಸ ಹಾಳೆ 4 (ಮೈಸೂರು ಜಿಲ್ಲೆಯ ಪರಿಚಯ)

❖ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಕಿರು ಪರಿಚಯ ಓದಿ ಉತ್ತರಿಸಿ:

ಮೈಸೂರು ಜಿಲ್ಲೆಯಲ್ಲಿ 7 ತಾಲ್ಲೂಕುಗಳಿವೆ. ಅವುಗಳೆಂದರೆ ಮೈಸೂರು, ನಂಜನಗೂಡು, ತಿ.ನರಸೀಪುರ, ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ. ದಕ್ಷಿಣಕಾಶಿ ಎಂದು ಹೆಸರಾದ ಶ್ರೀಕಂಠೇಶ್ವರ ದೇವಾಲಯವಿರುವುದು ನಂಜನಗೂಡಿನಲ್ಲಿ. ಈ ತಾಲ್ಲೂಕು ರಸಬಾಳೆ ಹಣ್ಣಿಗೂ ಪ್ರಸಿದ್ಧಿ. ಕೃಷ್ಣರಾಜೇಂದ್ರ ಒಡೆಯರ್ ಹೆಸರುಳ್ಳ ತಾಲ್ಲೂಕು ಕೆ.ಆರ್.ನಗರ. ಇದು ಭತ್ತದ ನಾಡೆಂದೇ ಗುರುತಿಸಿಕೊಂಡಿದೆ.

ಮೈಸೂರನ್ನು ಸಾಂಸ್ಕೃತಿಕ ರಾಜಧಾನಿ ಎಂದೇ ಕರೆಯುವರು. ಇದರ ಸನಿಹವೇ ಹೆಸರಾಂತ ಕನ್ನಂಬಾಡಿ ಕಟ್ಟೆ (KRS) ಇರುವುದು. ಮೈಸೂರು ಅರಮನೆ, ದಸರಾ ಉತ್ಸವ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ನಾಡದೇವತೆ ಚಾಮುಂಡಿಬೆಟ್ಟದಲ್ಲಿ ನೆಲೆಸಿರುವಳು. ಕಾವೇರಿ ನದಿಯು ದಕ್ಷಿಣ ಗಂಗೆ ಎಂದೇ ಪ್ರಸಿದ್ಧಿಯಾಗಿದ್ದು ಜೀವನಾಡಿಯಂತಿದೆ. ಮೈಸೂರು ಮಲ್ಲಿಗೆ ಹೂ ಮತ್ತು ಮೈಸೂರು ಪಾಕ್ ಇಲ್ಲಿ ಪ್ರಸಿದ್ಧ. ಶಿಕ್ಷಣ, ಆರೋಗ್ಯ, ಕಲೆ–ಸಂಸ್ಕೃತಿ ನಿರ್ಮಾಣಕ್ಕೆ ಮೈಸೂರನ್ನು ಆಳಿದ ಒಡೆಯರ್ ರಾಜವಂಶವು ಅವಿಸ್ಮರಣೀಯ ಕಾಣಿಕೆ ನೀಡಿದೆ.

❖ ಸೂಚನೆ ಅನುಸರಿಸಿ ಮೈಸೂರು ಜಿಲ್ಲೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಿ:

1. ಪ್ರಸಿದ್ಧ ಶ್ರೀಕಂಠೇಶ್ವರ ದೇವಾಲಯವಿದೆ. ರಸಬಾಳೆ ಹಣ್ಣಿಗೂ ನಾನು ಪ್ರಸಿದ್ಧ. ಹಾಗಾದರೆ ನಾನು ಯಾವ ತಾಲ್ಲೂಕು?

   ಉ: ..............................

2. ನನ್ನ ತಾಲ್ಲೂಕಿನ ಹೆಸರಿಗೆ ಮೈಸೂರು ಅರಸರ ಹೆಸರಿದೆ. ನನ್ನನ್ನು ಭತ್ತದ ನಾಡು ಎನ್ನುವರು. ಹಾಗಾದರೆ ನಾನು ಯಾವ ತಾಲ್ಲೂಕು?

   ಉ: ..............................

❖ ಅದಲು ಬದಲಾದ ಅಕ್ಷರಗಳಿಂದ ಸರಿಯಾದ ಪದ ರಚಿಸು:

1. ಕಾ ದಿ ನ ವೇ ರಿ : ...........................
2. ನೆ ಅ ಮ ರ ಸೂ ಮೈ ರು : .................................
3. ಡಿ ಚಾ ಟ್ಟ ಮುಂ ಬೆ : .................................
4. ರಾ ದ ಸ ತ್ಸ ಉ ವ : .................................

❖ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಮೈಸೂರು ಜಿಲ್ಲೆಯಲ್ಲಿರುವ ತಾಲ್ಲೂಕುಗಳ ಹೆಸರುಗಳನ್ನು ಬರೆಯಿರಿ.

2. ಮೈಸೂರಿನ ಸಮೀಪವಿರುವ ಪ್ರಸಿದ್ಧ ಅಣೆಕಟ್ಟು ಯಾವುದು?

3. ಮೈಸೂರು ಜಿಲ್ಲೆಯು ಯಾವ ಹೂ ಮತ್ತು ಸಿಹಿ ತಿನಿಸಿಗೆ ಪ್ರಸಿದ್ಧಿಯಾಗಿದೆ?